## ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ‘ರಾಷ್ಟ್ರೀಯ ಸೇವಾ ಯೋಜನೆಯ ಸಂಸ್ಥಾಪನಾ ದಿನಾಚರಣೆ’ ಕಾರ್ಯಕ್ರಮ

ಯುವ ಸಮುದಾಯ ಸಮಾಜಮುಖಿಯಾದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಮಹಾರಾಣಿ ಮಹಿಳಾ ಕಲಾ ಕಾಲೇಜು ಸ್ನಾತಕೋತ್ತರ ಕೇಂದ್ರದ ಅರ್ಥಶಾಸ್ತ್ರ ಪ್ರಾಧ್ಯಾಪಕ ಡಾ.ಪುಟ್ಟರಾಜು ಅಭಿಪ್ರಾಯಪಟ್ಟರು.



ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ‘ರಾಷ್ಟ್ರೀಯ ಸೇವಾ ಯೋಜನೆಯ ಸಂಸ್ಥಾಪನಾ ದಿನಾಚರಣೆ’ ಕಾರ್ಯಕ್ರಮವನ್ನು ಬಲೂನ್ ಹಾರಿಬಿಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಯಾವುದೇ ದೇಶಕ್ಕೆ ಯುವ ಶಕ್ತಿ ದೊಡ್ಡ ಆಸ್ತಿ. ಈ ಯುವಶಕ್ತಿಯನ್ನು ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಸಿದ್ದೇ ಆದರೆ ಅನಕ್ಷರತೆ, ಮೂಢನಂಬಿಕೆ, ಬಾಲ್ಯ ವಿವಾಹ, ಭ್ರಷ್ಟಾಚಾರ, ಭಯೋತ್ಪಾದನೆ ಮುಂತಾದ ಅನಿಷ್ಟಗಳನ್ನು ತೊಡೆದುಹಾಕಲು ಸಾಧ್ಯವಾಗಲಿದೆ ಎಂದರು.

ಶಿಕ್ಷಣದ ಮೂಲಕ ಸೇವೆ ಮತ್ತು ಸೇವೆಯ ಮೂಲಕ ಶಿಕ್ಷಣ ಪಡೆಯುವುದು ಈ ಯೋಜನೆಯ ಆಶಯ. 1969ರಲ್ಲಿ ಆರಂಭವಾದ ಈ ಯೋಜನೆಯಡಿ ಇಂದು ದೇಶದ ಎಲ್ಲ ಕಾಲೇಜುಗಳಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿದ್ದಾರೆ. ಜಾಗೃತಿ ಮೂಲಕ ಸಮಾಜ ಪರಿವರ್ತನೆ ಮಾಡುವ ಜವಾಬ್ದಾರಿ ಇವರ ಮೇಲಿದೆ. ಇದನ್ನು ಅರ್ಥಮಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಕಾಲೇಜಿನ ವಿವಿಧ ಸಮಿತಿಗಳ ಮುಖ್ಯ ಸಂಯೋಜಕರಾದ ಪ್ರೊ.ಎಂ.ಶಿವಣ್ಣ ಮಾತನಾಡಿ, ಸಮಾಜದ ಬಹುತೇಕ ಸಮಸ್ಯೆಗಳಿಗೆ ಸೇವಾ ಮನೋಭಾವದ ಕೊರತೆಯೇ ಕಾರಣ. ಶುಚಿತ್ವ, ಜಾಗೃತಿ, ಸೇವೆ, ಸಹಕಾರದಿಂದ ಮಾತ್ರ ಸಹಬಾಳ್ವೆ ಸಾಧ್ಯ. ರಾಸೇಯೋ ಸ್ವಯಂ ಸೇವಕಿಯರು ಈ ಸೇವೆಯನ್ನು ಸಾಮಾಜಿಕ ಹೊಣೆಗಾರಿಕೆ ಎಂದು ಭಾವಿಸುವಂತೆ ತಿಳಿ ಹೇಳಿದರು.

ಅಧ್ಯಕ್ಷತೆವಹಿಸಿ ಮಾತನಾಡಿದ ಪ್ರಾಂಶುಪಾಲ ಡಾ.ಅಣ್ಣೇಗೌಡ, ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಯುವ ಸಮುದಾಯದ ಪಾತ್ರ ಮಹತ್ವದ್ದು. ಅರಣ್ಯ ಸಂರಕ್ಷಣೆ, ಗ್ರಾಮೀಣ ನೈರ್ಮಲ್ಯ, ಪರಿಸರ ಮಾಲಿನ್ಯ ಮುಂತಾದ ದೊಡ್ಡ ಸಮಸ್ಯೆಗಳು ಸಮಾಜವನ್ನು ಕಾಡುತ್ತಿವೆ. ಈ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಶ್ರಮಿಸುವಂತೆ ಸ್ವಯಂ ಸೇವಕಿಯರಿಗೆ ಕರೆ ನೀಡಿದರು.

ರಾಸೇಯೋ ಕಾರ್ಯಕ್ರಮಾಧಿಕಾರಿ ಡಾ.ಕಂಚಿನಕೆರೆ ಗೋವಿಂದೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ಕಳೆದ ಎರಡು ವರ್ಷಗಳಲ್ಲಿ ರಾಸೇಯೋ ವತಿಯಿಂದ ಕೈಗೊಂಡ ಕೆಲಸ ಕಾರ್ಯಗಳು ಹಾಗೂ ಪ್ರಸಕ್ತ ವರ್ಷದ ಉದ್ದೇಶಿತ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು.

ಸ್ನಾತಕೋತ್ತರ ವಿಭಾಗದ ಮುಖ್ಯಸ್ಥ ಡಾ.ಜಿ.ಹೆಚ್.ಮಹದೇವಸ್ವಾಮಿ ಹಾಗೂ ವಾಣಿಜ್ಯಶಾಸ್ತ್ರ ವಿಭಾಗದ ಪ್ರೊ.ಸೋಮಣ್ಣ ಮಾತನಾಡಿದರು. ಸ್ವಯಂ ಸೇವಕಿಯರಾದ ಸಂಗೀತ & ಶಶಿಕಲ ಸಂಗಡಿಗರು ಪ್ರಾರ್ಥಿಸಿದರು. ಕು.ಅರ್ಚನ ಕೆ. ಸ್ವಾಗತಿಸಿದರು. ಕು.ಕೆ.ಮೇಘ ನಿರೂಪಣೆ ಮಾಡಿದರು. ಕು.ಶಾಲಿನಿ ಸಿ. ವಂದಿಸಿದರು.

ರಾಸೇಯೋ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಈ ಕೆಳಕಂಡ ಸ್ವಯಂ ಸೇವಕಿಯರಿಗೆ ಇದೇ ಸಂದರ್ಭದಲ್ಲಿ ಬಹುಮಾನ ವಿತರಿಸಲಾಯಿತು.

**ಕೆರೆ-ದಡ ಸ್ಪರ್ಧೆ** : ಐಶ್ವರ್ಯ ಎಸ್-ದ್ವಿತೀಯ ಬಿಕಾಂ(ಪ್ರಥಮ), ಕೌಶಲ್ಯ ಟಿ.ಎಂ.-ಪ್ರಥಮ ಬಿಬಿಎಂ(ದ್ವಿತೀಯ), ಹರ್ಷಿತ ಎಂ-ಪ್ರಥಮ ಬಿಬಿಎಂ(ತೃತೀಯ)

**ಪಟ್ಟಣದಲ್ಲಿ ಸಿಡಿಮದ್ದು ಸ್ಪರ್ಧೆ**: ಸವಿತ ಎ-ತೃತೀಯ ಬಿಬಿಎಂ(ಪ್ರಥಮ), ರುಗುಣ ವೈ.-ದ್ವಿತೀಯ ಬಿಕಾಂ (ದ್ವಿತೀಯ), ಶಾಲಿನಿ ಸಿ-ತೃತೀಯ ಬಿಬಿಎಂ(ತೃತೀಯ).

**ಚೆಂಡು ಮತ್ತು ಬಕೆಟ್ ಸ್ಪರ್ಧೆ**: ಪ್ರಿಯಾಂಕ ಎ-ದ್ವಿತೀಯ ಬಿಕಾಂ(ಪ್ರಥಮ), ಮೇಘನ ಆರ್-ತೃತೀಯ ಬಿಕಾಂ(ದ್ವಿತೀಯ), ಅನಿತಾ ಜಿ- ದ್ವಿತೀಯ ಬಿಕಾಂ(ತೃತೀಯ)

**ಚಮಚ ಮತ್ತು ನಿಂಬೆಹಣ್ಣು ಸ್ಪರ್ಧೆ**: ಸುಜನ ಆರ್(ಪ್ರಥಮ), ಶೀಲ(ದ್ವಿತೀಯ), ಅರ್ಚನ ಕೆ-ಪ್ರಥಮ ಬಿಕಾಂ(ತೃತೀಯ)

**ಲೋಟಗಳ ಜೋಡಣೆ ಸ್ಪರ್ಧೆ:** ಸುಜನ ತೃತೀಯ ಬಿಕಾಂ- (ಪ್ರಥಮ), ಮೇಘ ಆರ್-ದ್ವಿತೀಯ ಬಿಕಾಂ- (ದ್ವಿತೀಯ), ಸಂಗೀತ(ತೃತೀಯ).

**ಮ್ಯೂಜಿಕಲ್ ಛೇರ್ ಸ್ಪರ್ಧೆ** : ಪ್ರೆಸಿಲ್ಲ ಪ್ರಮೋದ್-ದ್ವಿತೀಯ ಬಿಕಾಂ(ಪ್ರಥಮ), ಪಲ್ಲವಿ ಎಚ್.ಎಂ.(ದ್ವಿತೀಯ), ಫಾತಿಮ ಸಿ-ಪ್ರಥಮ ಬಿಕಾಂ(ತೃತೀಯ)

ರಂಗೋಲಿ ಸ್ಪರ್ಧೆ: ಮೇಘನ ಆರ್-ತೃತೀಯ ಬಿಕಾಂ(ಪ್ರಥಮ), ಸುಜನ ಆರ್-ತೃತೀಯ ಬಿಕಾಂ(ದ್ವಿತೀಯ), ಗಿರಿಜಾ ಪಿ-ದ್ವಿತೀಯ ಬಿಬಿಎಂ(ತೃತೀಯ).